

ಹರಕೆಯ ಕೋಳಿಗಳು



ಅರೆಕಲ್ಲು ಅಯ್ಯಪ್ಪ ದೇವಸ್ಥಾನ ಪ್ರಾಂಗಣ

ಸಾಂಪ್ರದಾಯಿಕ ಪೋಷಾಕಿನಲ್ಲಿರುವ ಸುಮಾರು 50ಕ್ಕೂ ಹೆಚ್ಚು ಮಂದಿ ಗುಡಿಗೆ ಸುತ್ತು ಹಾಕುತ್ತ 'ಬೊಳ್ಕಾಟ್' ನೃತ್ಯ ಮಾಡುತ್ತಾರೆ. ಈ ನೃತ್ಯ ಬೆಳಗ್ಗೆ ನಾಲ್ಕು ಗಂಟೆ ತನಕ ನಡೆಯುತ್ತದೆ. ಆಮೇಲೆ ಪ್ರಸಾದ ವಿತರಣೆ.

ಅಂದೇ ಸಂಜೆ ಗುಡಿಯಿಂದ ಹೊರಗೆ ಅಂಗಳದಲ್ಲಿ ಸ್ತ್ರೀಯರು ಪಾಲ್ಗೊಳ್ಳುವ 'ಉಮ್ಮತ್ತಾಟ'ವೆಂಬ ಸಾಮೂಹಿಕ ನೃತ್ಯ ನಡೆಯುತ್ತದೆ. ಮಹಿಳೆಯರಿಗೆ ಗುಡಿಯ ಆವರಣದೊಳಗೆ ಪ್ರವೇಶ ನಿಷೇಧ. ಗ್ರಾಮದ ನಿವಾಸಿಗಳು ಒಟ್ಟಾಗಿ ದೋಸೆ ಹೊಯ್ಯುವ ಕಾರ್ಯಕ್ರಮ ಇಲ್ಲಿನ ವಿಶೇಷ. ಮಾರ್ಚ್ 14ರಂದು ಬೆಳಗ್ಗೆ ನಡೆಯುವ ಈ ಆಚರಣೆಯನ್ನು 'ಪಟ್ಟಣಿ' ಎನ್ನುತ್ತಾರೆ. 'ಪಟ್ಟಣಿ' ಎಂದರೆ ಕೊಡವ ಭಾಷೆಯಲ್ಲಿ ಉಪವಾಸ ಎಂದರ್ಥ.

ಹಿಂದೆ ಅಯ್ಯಪ್ಪನು ಒಮ್ಮೆ ಕಾಡಿನಲ್ಲಿ ಅನ್ನಾಹಾರವಿಲ್ಲದೆ ಮೂರು ದಿನ ಕಳೆದು ಕೊನೆಗೆ ಅರೆಕಲ್ಲಿಗೆ ಬಂದನು. ಅಲ್ಲಿ ಒಬ್ಬಳು ಕುಡಿಯರ ಅಜ್ಜಿಯು ಅವನಿಗೆ ನೀರುದೋಸೆ (ಅಕ್ಕಿಯಿಂದ ಮಾಡುವ ತೆಳ್ಳಗಿನ ದೋಸೆ) ನೀಡಿ ಹಸಿವನ್ನು ನೀಗಿಸಿದಳು. ಇದರಿಂದ ಸಂತೃಪ್ತನಾದ ಅಯ್ಯಪ್ಪ ಇಲ್ಲೇ ನೆಲೆ ನಿಂತ ಎಂದು ಕಥೆಯಿದೆ. ದೇವರಿಗೆ ಸಂಭವಿಸಿದ ಈ ಉಪವಾಸದ ಆಚರಣೆಯು 'ಪಟ್ಟಣಿ' ಎಂಬ ಹೆಸರಿನಲ್ಲಿ ನಡೆಯುತ್ತಿದೆ. ಆ ದಿನ ಅರೆಕಲ್ಲಿನ 24 ಮನೆಗಳವರು ಉಪವಾಸವಿರುತ್ತಾರೆ. ಇವರಲ್ಲಿ ಸ್ಥಳೀಯ ಮಲೆಕುಡಿಯರ ಮನೆಗಳಲ್ಲದೆ ವಿಶ್ವಕರ್ಮ ಜನಾಂಗದ ಮನೆಗಳವರೂ ಸೇರಿದ್ದಾರೆ. ಇವರಿಗೆ ಹಿಂದಿನ ದಿನ ಅಂದರೆ ಮಾರ್ಚ್ 13ರಂದು ಒಬ್ಬರಿಗೆ ಎರಡೂವರೆ ಕೆ.ಜಿ. ಅಕ್ಕಿಯನ್ನು ಗುಡಿಯಿಂದ ಕೊಡುತ್ತಾರೆ. ಅದನ್ನು ಮನೆಗೊಯ್ದು ನೀರಲ್ಲಿ ನೆನೆಹಾಕಿ ಮರುದಿನ ಬೆಳಗ್ಗೆ ರುಬ್ಬಿ ಬುಟ್ಟಿ, ಕಾವಲಿಯೊಂದಿಗೆ ಗುಡಿ ಬಳಿಯ ದೋಸೆ ಹೊಯ್ಯುವ ಸ್ಥಳಕ್ಕೆ ಬರುತ್ತಾರೆ. ದೋಸೆ ಹೊಯ್ಯುವವರೇ ಹೊಯ್ಯಲು ಬೇಕಾದ ಪರಿಕರಗಳನ್ನು ಅಂದರೆ ಒಲೆ, ಸೌದೆಗಳನ್ನು ಮೊದಲೇ ನಿಗದಿಪಡಿಸಿದ ಸ್ಥಳದಲ್ಲಿ ಸಿದ್ಧಪಡಿಸಿಟ್ಟುಕೊಂಡಿರುತ್ತಾರೆ. ಎಲ್ಲ 24 ಮನೆಗಳ ಮಹಿಳೆಯರು ಸೇರಿ ಕಾವಲಿ ಇಟ್ಟು ದೋಸೆ ಹೊಯ್ಯುತ್ತಾರೆ. ಯಾವುದಾದರೂ ಒಂದು ಮನೆಯಲ್ಲಿ ಮಹಿಳೆ ಇಲ್ಲದಿದ್ದರೆ ಅಥವಾ ಅವಳು ಮುಟ್ಟು ಆಗಿದ್ದರೆ ಅವಳ ಪರವಾಗಿ ಆ ಮನೆಯ ಗಂಡಸು ದೋಸೆ ಹೊಯ್ಯಬೇಕೆಂಬ ನಿಯಮ ಇದೆ.

ಬೆಳಗ್ಗೆ ಎಂಟೂವರೆಗೆ ಆರಂಭವಾಗುವ ಈ ಕಾರ್ಯಕ್ರಮ ಮಧ್ಯಾಹ್ನ ಹನ್ನೆರಡು– ಒಂದು ಗಂಟೆ ತನಕ ಮುಂದುವರಿಯುತ್ತದೆ. ನಾಲ್ಕೈದು ಗಂಟೆಗಳಲ್ಲಿ ತಯಾರಾದ ದೋಸೆಗಳನ್ನು ಪ್ರತ್ಯೇಕ ಬುಟ್ಟಿಗಳಲ್ಲಿ ತುಂಬಿ ದೇವರ ಗುಡಿಯ ಕೆಳಗಿನ ಅಂಗಣದ ಕೋಣೆಯೊಂದರಲ್ಲಿ ಇಡುತ್ತಾರೆ. ಇದೇ ಸಮಯದಲ್ಲಿ ಅಲ್ಲೇ ಸಮೀಪ ಗಾಳಿಬೀಡಿನ ಪೂಮಲೆಕುಡಿಯರು ಗುಜ್ಜೆ (ಎಳೆ ಹಲಸಿನಕಾಯಿ) ಹುರುಳಿ ಸೇರಿಸಿ ಸಾಂಬಾರು ತಯಾರಿಸುತ್ತಾರೆ. ಗುಜ್ಜೆ ಬಿಟ್ಟು ಅನ್ಯ ತರಕಾರಿ ಸಾಂಬಾರು ಮಾಡುವ ಕ್ರಮ ಇಲ್ಲ. ದೋಸೆ ಮತ್ತು ಗುಜ್ಜೆ ಸಾಂಬಾರನ್ನು ಅಯ್ಯಪ್ಪನಿಗೆ ಸಮರ್ಪಿಸಿ, ಸಂಜೆ ಸುಮಾರು 6–7 ಗಂಟೆ ಹೊತ್ತಿಗೆ ದೈವಕ್ಕೆ ಸಂಬಂಧಿಸಿದ ಗಾಳಿಬೀಡಿನ ಪೂಮಲೆಕುಡಿಯರು ಮತ್ತು ದೋಸೆ ತಯಾರಿಸಿದ ಮನೆಯವರು ಸೇರಿ ಕಾಡಿನಲ್ಲಿ ಸಿಗುವ ಕೂಗೆಲೆಯಲ್ಲಿ ಬಡಿಸಿ ತಿಂದು ಉಪವಾಸ (ಪಟ್ಟಣಿ) ವ್ರತವನ್ನು ಅಂತ್ಯಗೊಳಿಸುತ್ತಾರೆ. ಇನ್ನುಳಿದ ಜಾತಿವರ್ಗಗಳವರಿಗೆ ಸಾಮೂಹಿಕ ಭೋಜನವಿದೆ.

ಇದೇ ದಿನ ರಾತ್ರಿ ಕೋಳಿ ಒಪ್ಪಿಸುವ ಹರಕೆಯೂ ಇಲ್ಲಿನ ಹಬ್ಬದ ಪ್ರಮುಖ ಅಂಶ. ಹರಕೆ ಹೇಳಿಕೊಂಡವರು ಉತ್ಸವಕ್ಕೆ ಬರುವಾಗ ತಮ್ಮ ಜತೆಗೆ ಕೋಳಿಗಳನ್ನು ತರುತ್ತಾರೆ. ನೂರಾರು ಹರಕೆ ಕೋಳಿಗಳ ಕಾಲುಗಳನ್ನು ಕಟ್ಟಿ ಉದ್ದ ಕೋಲುಗಳಿಗೆ ತಲೆಕೆಳಗಾಗಿ ಪೋಣಿಸುತ್ತಾರೆ. ಮಧ್ಯರಾತ್ರಿ ಕಳೆದು ತುಂಬಾ ಹೊತ್ತು ಪಾತ್ರಿಗಳು ಆವೇಶಗೊಂಡು ಗುಡಿಗೆ ಸುತ್ತು ಬರುವ ಕ್ರಿಯಾದಿಗಳು ಆದ ಬಳಿಕ ಕೋಳಿಗಳನ್ನು ಹೆಣೆದ ಕೋಲುಗಳ ತುದಿಯನ್ನು ಆ ಕಡೆಯಿಂದ ಒಬ್ಬರು, ಈ ಕಡೆಯಿಂದ ಒಬ್ಬರು ಹೆಗಲ ಮೇಲೆ ಹೊತ್ತು ಸಮೀಪದ ಬೆಟ್ಟಕ್ಕೆ ಹೋಗುತ್ತಾರೆ. ಅಲ್ಲಿ ಒಂದು ಗುಹೆಯಲ್ಲಿರುವ ದೇವಿಗೆ ಅರ್ಪಿಸುತ್ತಾರೆ. ಗುಹೆಗೆ ಹೋಗಲು ಮೂವರು ನಿರ್ದಿಷ್ಟ ವ್ಯಕ್ತಿಗಳಿಗೆ ಮಾತ್ರ ಪ್ರವೇಶದ ಅವಕಾಶ. ಬೆಟ್ಟದಲ್ಲಿ ತಲೆ ತುಂಡು ಮಾಡಿದ ಕೋಳಿ ಶರೀರವನ್ನು ಕೆಳಗೆ ತಂದು ಭಕ್ತರಿಗೆ ಪ್ರಸಾದವಾಗಿ ಹಿಂತಿರುಗಿಸುತ್ತಾರೆ. ಕೋಳಿ ಸಿಗುವಾಗ ಮರುದಿನ (ಮಾರ್ಚ್ 15) ಮಧ್ಯಾಹ್ನವಾಗುತ್ತದೆ.

ಅಯ್ಯಪ್ಪ ದೇವರು ಬಂಜೆಯರಿಗೆ ಮಕ್ಕಳನ್ನು ಕರುಣಿಸುತ್ತಾನೆಂಬ ನಂಬಿಕೆ ಇರುವುದರಿಂದ ಬಹುಕಾಲ ಮಕ್ಕಳಾಗದಿರುವ ಹೆಂಗಸರು ದೇವರ ಕೃಪೆಗಾಗಿ ಇಲ್ಲಿಗೆ ಬರುತ್ತಾರೆ. ಬಹಳ ದೂರದ ಊರುಗಳಿಂದಲೂ ಮಹಿಳೆಯರು ಬರುತ್ತಾರೆ. ಇವರು ಸ್ನಾನ ಮಾಡಿ ಬಿಳಿ ಬಟ್ಟೆ ಉಟ್ಟು ಗುಡಿಯಿಂದ ಕೆಳಗಿನ ಅಂಗಣಕ್ಕೆ ಇಳಿಯುವ ಮೆಟ್ಟಿಲುಗಳ ಮೇಲೆ ಕೈಯಲ್ಲಿ ಹಿಂಗಾರ ಹಿಡಿದು ನಿಲ್ಲುತ್ತಾರೆ. ಗುಡಿಗೆ ಸುತ್ತು ಬರುವ ಮುಖ್ಯ ಪಾತ್ರಿಯು ಒಂದೆರಡು ಸಲ ಮೆಟ್ಟಿಲುಗಳ ಬಳಿ ಬಂದು ಅವರನ್ನು ಆಶೀರ್ವದಿಸುವ ಕ್ರಿಯೆ ನಡೆಸುತ್ತಾನೆ. ಮರುದಿನವೂ ಈ ಮಹಿಳೆಯರು ಸ್ನಾನ ಮಾಡಿ ಪ್ರಸಾದಕ್ಕಾಗಿ ಅಪರಾಹ್ನದ ತನಕ ಕಾಯಬೇಕು. ಕೋಳಿ ತಲೆ ಕಡಿದು ಬೆಟ್ಟದಿಂದ ಹಿಂದಿರುಗಿದ ಬಳಿಕ ಸಂಕ್ಷಿಪ್ತವಾಗಿ ಆಚರಣಾ ವಿಧಿಗಳನ್ನು ಮುಗಿಸಿ ಪ್ರಸಾದ ವಿತರಣೆ ಮಾಡಿ ಮಕ್ಕಳ ಅನುಗ್ರಹಕ್ಕಾಗಿ ಕಾಯುತ್ತಿರುವ ಮಹಿಳೆಯರಿಗೆ ಮುಖ್ಯಪಾತ್ರಿಯು ಆಶೀರ್ವದಿಸುತ್ತಾನೆ. ಹೀಗೆ ಮಾರ್ಚ್ 15ರ ಅಪರಾಹ್ನಕ್ಕೆ ಹಬ್ಬ ಮುಗಿಯುತ್ತದೆ. ಬಳಿಕ ದೈವದ ಭಂಡಾರವನ್ನು ಬಾಡತ್ತೊಕ್ಕಡ ಮನೆಗೆ ಮರಳಿ ಕೊಂಡೊಯ್ಯಲಾಗುತ್ತದೆ. ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಬಹಳಷ್ಟು ಜನ ಈ ಹಬ್ಬದಲ್ಲಿ ಪಾಲ್ಗೊಳ್ಳುತ್ತಾರೆ.

1992ರವರೆಗೂ ಇಲ್ಲಿ ಹಬ್ಬವು ದೊಂದಿ ಬೆಳಕಿನಲ್ಲಿ ಜರಗುತ್ತಿತ್ತು. ಈಗ ಡೀಸೆಲ್ ಜನರೇಟರನ್ನು ಬಳಸುತ್ತಾರೆ. ಬೇಲಿಯನ್ನು ಹಾಕದೆಯೆ ಈ ದೇವರಕಾಡು ಸಂರಕ್ಷಿಸಲ್ಪಟ್ಟಿರುವುದು ಇದರ ವಿಶೇಷತೆ. ಇಲ್ಲಿ ಆನೆ, ಕಾಟಿ, ಚಿರತೆಗಳು ಸಂಚರಿಸುತ್ತಿರುತ್ತವೆ. ಗ್ರಾಮಸ್ಥರು ಹಾಗೂ ಪೂಮಲೆಕುಡಿಯರು ಈ ದೇವರಕಾಡನ್ನು ಒಗ್ಗಟ್ಟಿನಿಂದ ಸಂರಕ್ಷಿಸಿಕೊಂಡು ಹೋಗುತ್ತಿದ್ದಾರೆ.